**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ13**

**ಎಸ್.ಸಿ. ಸಂಖ್ಯೆ: 506/2023 ಪಿಡಬ್ಲ್ಯೂ26**

**ಸಾಕ್ಷಿದಾರರ ಹೆಸರು** : ಬೆಳ್ಳಿಯಪ್ಪ ಕೆ ಯು

**ತಂದೆ ಹೆಸರು** : ಉತ್ತಯ್ಯ ಕೆ ಸಿ

**ವಯಸ್ಸು** : 52

**ವೃತ್ತಿ** : ಪೋಲೀಸು ಉಪಾಧೀಕ್ಷಕರು ಉಡುಪಿ ಉಪ ವಿಭಾಗ

**ವಾಸ** : ಉಡುಪಿ

**ದಿನಾಂಕ: 09-06-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು ಜನವರಿ 2021 ರಿಂದ ಜನವರಿ 2025 ರ ವರೆಗೆ ಕುಂದಾಪುರದಲ್ಲಿ ಪೋಲೀಸ್ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:21-02-2023 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ.22 ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿದೆನು. ಅದೇ ದಿನ ಈ ಪ್ರಕರದ ತನಿಖೆಯನ್ನು ನಡೆಸಲು ಪೋಲೀಸು ಅಧೀಕ್ಷಕರು ಉಡುಪಿ ರವರು ನೀಡಿರುವ ಆದೇಶವನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಆದೇಶ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ-18 ಎ ಎಂದು ಗುರುತಿಸಲಾಯಿತು. ಅದೇ ದಿನ ಈ ಪ್ರಕರಣದಲ್ಲಿ ಆರೋಪಿತರನ್ನು ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸುವಂತೆ ಚಾಸಾ.22 ರವರಿಗೆ ಜ್ಞಾಪನವನ್ನು ನೀಡಿರುತ್ತೇನೆ.

ದಿನಾಂಕ:22-02-2023 ರಂದು ಈ ಪ್ರಕರಣದಲ್ಲಿ ತಕ್ಷೀರು ಸ್ತಳವಾದ ಗುಜ್ಜಾಡಿ ಗ್ರಾಮದ ಕೊಡಪಾಡಿ ಎಂಬಲ್ಲಿಗೆ ಹೋದಾಗ ಫಿರ್ಯಾದಿ ಖುದ್ದಾಗಿ ಹಾಜರಿದ್ದು, ತಕ್ಷೀರು ಸ್ತಳವನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ.7 ಮತ್ತು ಚಾಸಾ.10 ರವರ ಸಮಕ್ಷಮ ತಕ್ಷೀರು ಸ್ತಳದ ಮಹಜರನ್ನು ಬೆಳಿಗ್ಗೆ 9.30 ರಿಂದ 10.15 ಗಂಟೆ ವರೆಗೆ ಸ್ತಳದಲ್ಲೇ ನಡೆಸಲಾಯಿತು.

ಮಹಜರು ಸಮಯ ತಕ್ಷೀರು ಸ್ಥಳದ ಕರಡು ನಕಾಶೆ ತಯಾರಿಸಿರುತ್ತೇನೆ ಮತ್ತು ಛಾಯಾಚಿತ್ರ ತೆಗೆದಿರುತ್ತೇನೆ. ಸಾಕ್ಷಿ ಮಹಜರು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.2 ಡಿ ಎಂದು ಗುರುತಿಸಲಾಯಿತು. ಸಾಕ್ಷಿ ನಕಾಶೆ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.3 ಡಿ ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರು ಸಮಯ ತೆಗೆದ ಒಟ್ಟು 3 ಛಾಯಾಚಿತ್ರ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ.1 ರವರ ಮುಂದುವರಿದ ಹೇಳಿಕೆಯನ್ನು ಹಾಗೂ ಚಾಸಾ.2 ರಿಂದ ಚಾಸಾ.9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ.9 ರವರು ನನ್ನ ಮುಂದೆ ನಿಪಿ.8 ರಂತೆ ಹೇಳಿಕೆ ನೀಡಿರುತ್ತಾರೆ.

ಅದೇ ದಿನ ಈ ಪ್ರಕರಣದ ಆರೋಪಿ ನಾಗರಾಜ ಗಾಣಿಗ ಈತನನ್ನು ಚಾಸಾ.22 ರವರು ಬೆಳಿಗ್ಗ 10.00 ಗಂಟೆಗೆ ಮುಳ್ಳಿಕಟ್ಟೆ ಬಳಿ ವಶಕ್ಕೆ ಪಡೆದುಕೊಂಡು 11.00 ಗಂಟೆಗೆ ನನ್ನ ಮುಂದೆ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಸಾಕ್ಷಿ ಸದ್ರಿ ವರದಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.16 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.16 ಬಿ ಎಂದು ಗುರುತಿಸಲಾಯಿತು. ನಾನು ಆರೋಪಿ ನಾಗರಾಜ ಈತನ ಸ್ವ ಖುಷಿ ಹೇಳಿಕೆ ದಾಖಲಿಕೊಂಡೆನು. ಚಾಸಾ,11 ಮತ್ತು 12 ರವರನ್ನು ಠಾಣೆಗೆ ಕರೆಯಿಸಿ ಆರೋಪಿತನ ದಸ್ತಗಿರಿ ಮಹಜರು ತಯಾರಿಸಿರುತ್ತೇನೆ. ಸಾಕ್ಷಿ ಸದ್ರಿ ದಸ್ತಗಿರಿ ಮಹಜರು ನೋಡಿ ಗುರುತಿಸಿದ್ದು ಅದನ್ನು ನಿಪಿ.19 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.19 ಎ ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿತನನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಆರೋಪಿತರು ಮತ್ತು ಫಿರ್ಯಾದಿಯ ಜಾತಿ ಪ್ರಮಾಣ ಪತ್ರ ಕೋರಿ ಚಾಸಾ.19 ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಸದ್ರಿ ಕೋರಿಕೆ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ.20 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.20 ಎ ಎಂದು ಗುರುತಿಸಲಾಯಿತು.ಅದೇ ದಿನ ಚಾಸಾ.17 ಇವರಿಗೆ ಆರೋಪಿತರ ಮನೆಗೆ ವಿದ್ಯುತ್ ಸಂಪರ್ಕ ನೀಡಿರುವ ಬಗ್ಗೆ ಮತ್ತು ಘಟನಾ ಸಮಯ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ವರದಿ ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಸದ್ರಿ ಕೋರಿಕೆ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ.21 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.21 ಎ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ.15 ರವರಿಗೆ ಆರೋಪಿತರ ಮನೆಯ ಮನೆ ನಂಬ್ರ ಒದಗಿಸುವಂತೆ ಕೋರಿ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದ್ರಿ ಕೋರಿಕೆ ಪತ್ರ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.9 ಎಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ಓರ್ವ ಆರೋಪಿತ ಕಾನೂನಿನೊಡನೆ ಸಂಘರ್ಷಕ್ಕೀಳಿದ ಬಾಲಕ ಎಂದು ತಿಳಿದು ಬಂದ ಕಾರಣ ಆತನ ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣ ಪತ್ರ ಮತ್ತು ಶಾಲಾ ನೊಂದಣಿ ದೃಢೀಕರಣ ಪತ್ರ ನೀಡುವಂತೆ ಕೋರಿ ಆತ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಾದ ಚಾಸಾ.18 ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದ್ರಿ ಕೋರಿಕೆ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ.22 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.22 ಎ ಎಂದು ಗುರುತಿಸಲಾಯಿತು.

ದಿನಾಂಕ:23-02-2023 ರಂದು ಚಾಸಾ.22 ಮತ್ತು ಚಾಸಾ.23 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

ದಿನಾಂಕ:27-02-2023 ರಂದು ಚಾಸಾ.18 ರವರು ಕಾನೂನಿನೊಡನೆ ಸಂಘರ್ಷಕ್ಕೀಳಿದ ಬಾಲಕನ ವರ್ಗಾವಣೆ ಪ್ರಮಾಣ ಪತ್ರ ಮತ್ತು ಕಲಿಕಾ ಪ್ರಮಾಣ ಪತ್ರದ ಜೆರಾಕ್ಸ ಪ್ರತಿ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ:01-03-2023 ರಂದು ಆರೋಪಿತರು ನಿರ್ಮಾಣ ಮಾಡಿಕೊಂಡಿರುವ ಮನೆಯ ಬಗ್ಗೆ ವಿವರಗಳನ್ನು ಕೋರಿ ಚಾಸಾ.20 ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದ್ರಿ ಕೋರಿಕೆ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ.23 ಎಂದೂಾ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.23 ಎ ಎಂದು ಗುರುತಿಸಲಾಯಿತು.

ದಿನಾಂಕ:04-03-2023 ರಂದು ಚಾಸಾ.15 ರವರು ಆರೋಪಿತರ ಮನೆಯ ಬಗ್ಗೆ ನೀಡಿದ ದಾಖಲಾತಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಸದ್ರಿ ದಾಖಲಾತಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.10 ಸಿ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ.16 ರವರು ಆರೋಪಿತರ ಮನೆಗೆ ವಿದ್ಯುತ್ ಸಂಪರ್ಕ ನೀಡಿದ ಬಗ್ಗೆ ಮತ್ತು ಘಟನೆ ಸಂದರ್ಭ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ನೀಡಿದ ದಾಖಲಾತಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಸದ್ರಿ ದಾಖಲಾತಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.11 ಬಿ ಎಂದು ಗುರುತಿಸಲಾಯಿತು.

ದಿನಾಂಕಃ09-03-2023 ರಂದು ಈ ಪ್ರಕರಣದಲ್ಲಿ ಚಾಸಾ.19 ರವರು ಫಿರ್ಯಾದಿ ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರ ನೀಡಿದ್ದನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಸದ್ರಿ ಜಾತಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.17 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.17 ಎ ಎಂದು ಗುರುತಿಸಲಾಯಿತು.

ದಿನಾಂಕಃ13-03-2023 ರಂದು ಚಾಸಾ.5 ರವರು ಠಾಣೆಗೆ ಹಾಜರಾಗಿ ತಾನು ತಕ್ಷೀರಿನ ಸಮಯ ತನ್ನ ಮೊಬೈಲ್ ನಿಂದ ಘಟನೆಗಳನ್ನು ವೀಡಿಯೋ ಚಿತ್ರೀಕರಣ ಮಾಡಿಕೊಂಡಿದ್ದು ಸದ್ರಿ ಮೊಬೈಲ್ ಇದುವೇ ಎಂದು ಹೇಳಿ ಮತ್ತು ಹಾಜರುಪಡಿಸಿದ್ದನ್ನು ಚಾಸಾ.13 ಮತ್ತು 14 ರವರ ಸಮಕ್ಷಮ ಮೊಬೈಲ್ ನಲ್ಲಿದ್ದ ವೀಡಿಯೋ ಮತ್ತು ಫೋಟೋವನ್ನು ಕಚೇರಿಯ ಕಂಪ್ಯೂಟರ್ ಗೆ ಡೌನ್ ಲೋಡ್ ಮಾಡಿಕೊಂಡು ಅದನ್ನು ಸಿ.ಡಿ ಗೆ ವರ್ಗಾಯಿಸಿರುತ್ತೇನೆ. ಈ ಬಗ್ಗೆ ಸಂಜೆ 5.45 ರಿಂದ 6.30 ರ ವರೆಗೆ ವಿವರವಾದ ಪಂಚನಾಮೆ ತಯಾರಿಸಿರುತ್ತೇನೆ. ಸಾಕ್ಷಿ ಸದ್ರಿ ಮಹಜರು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.5 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ಸದ್ರಿ ಸಿಡಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಸದ್ರಿ ಮೊಬೈಲ್ ನಲ್ಲಿದ್ದ ಛಾಯಾಚಿತ್ರ ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ.5 ರವರು ನೀಡಿದ ಕಲಂ 65 ಬಿ ರಡಿಯಲ್ಲಿನ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಸದ್ರಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.6 ಬಿ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ.24 ಇವರ ಹೇಳಿಕೆ ಮತ್ತು ಅವರು 65 ಬಿ ರಡಿಯಲ್ಲಿ ನೀಡಿದ ದೃಢಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸದ್ರಿ ದೃಢಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ.24 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.24 ಎ ಎಂದು ಗುರುತಿಸಲಾಯಿತು.

ದಿನಾಂಕಃ16-03-2023 ರಂದು ಈ ಪ್ರಕರಣದಲ್ಲಿನ ಆರೋಪಿತೆ ಭಾರತಿ ಗಾಣಿಗ ಇವರು ಮಾನ್ಯ ಸೆಶನ್ಸ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಬಂದು ಹಾಜರಾದವರನ್ನು ನಾನು ಅವರನ್ನು ವಿಚಾರಿಸಿ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ.

ಅದೇ ದಿನ ಈ ಪ್ರಕರಣದಲ್ಲಿ ಕಾನೂನಿನೊಡನೆ ಸಂಘರ್ಷಕ್ಕಿಳಿದ ಬಾಲಕ ಜನನ ಪ್ರಮಾಣ ಪತ್ರವನ್ನು ಚಾಸಾ.21 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನ ಚಾಸಾ.20 ರವರು ಆರೋಪಿತರ ಮನೆ ಕಟ್ಟಡ ಮತ್ತು ಸ್ಥಳದ ಬಗ್ಗೆ ನೀಡಿದ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿ ಸದ್ರಿ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-25 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-25 ಎ ಎಂದು ಗುರುತಿಸಲಾಯಿತು.

ದಿನಾಂಕಃ03-03-2023 ರಂದು ಮೆಸ್ಕಾಂ ಮಂಗಳೂರು ರವರು ನನ್ನ ಕೋರಿಕೆ ಮೇರೆಗೆ ನೀಡಿದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಸದ್ರಿ ವರದಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-14 ಬಿ ಎಂದು ಗುರುತಿಸಲಾಯಿತು.

ದಿನಾಂಕಃ06-04-2023 ರಂದು ಈ ಪ್ರಕರಣದಲ್ಲಿ ಪೋಲೀಸು ಅಧೀಕ್ಷಕರು ಉಡುಪಿ ರವರು ದೋಷಾರೋಪಣಾ ಪತ್ರ ಸಲ್ಲಿಸಲು ಅನುಮತಿ ನೀಡಿದಂತೆ ಕಾನೂನಿನೊಡನೆ ಸಂಘರ್ಷಕ್ಕಿಳಿದ ಬಾಲಕನ ದೋಷಾರೋಪಣಾ ಪತ್ರವನ್ನು ಬಾಲ ನ್ಯಾಯ ಮಂಡಳಿಗೆ ಹಾಗೂ ಉಳಿದ ಇಬ್ಬರು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ಸದ್ರಿ ಅನುಮತಿ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ-26 ಎಂದೂಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-26 ಎ ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ವಕೀಲರಾದ ಶ್ರೀ ಕೆ ಪಿ ಕೆ ಎಸ್ ರವರಿಂದ

ಈ ಪ್ರಕರಣದಲ್ಲಿ ಕಾಣಿಸಿದ ಚಾಸಾ.2 ರಿಂದ ಚಾಸಾ.6 ರವರು ಫಿರ್ಯಾದಿದಾರರ ಸಂಬಂಧಿಕರು ಎಂದರೆ ಸರಿ. ಘಟನೆ ನಡೆದಿದ್ದು ದಿನಾಂಕಃ16-02-2023 ಕ್ಕೆ ಫಿರ್ಯಾದಿದಾರರು ಫಿರ್ಯಾದಿ ನೀಡಿದ್ದು ದಿನಾಂಕಃ21-02-2023 ಕ್ಕೆ ಎಂದರೆ ಸರಿ. ಘಟನೆ ಆದ ಆರು ದಿನಗಳ ನಂತರ ಫಿರ್ಯಾದಿ ದಾಖಲಾಗಿದೆ ಎಂದರೆ ಸರಿ. ನನ್ನ ತನಿಖೆ ಕಾಲದಲ್ಲಿ ಆರೋಪಿತರ ವಿರುದ್ಧ ಈ ಪ್ರಕರಣ ದಾಖಲಾಗುವ ದಿವಸ 1 ನೇ ಆರೋಪಿ ಪಿನ್ನಾಲ್ ಸೇವನೆ ಮಾಡಿ ಚಿಕಿತ್ಸೆ ಪಡೆದುಕೊಂಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತನಿಖೆ ಕಾಲದಲ್ಲಿ 1 ನೇ ಆರೋಪಿ ವಿಷ ಸೇವನೆ ಮಾಡಿ ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದು ಆ ಬಗ್ಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದು ಅದರ ಮಾಹಿತಿಯನ್ನು ಠಾಣೆಗೆ ಬಂದಿತ್ತೋ ಇಲ್ಲವೋ ಎಂದು ನಾನು ಚಾಸಾ.22 ರವರಲ್ಲಿ ವಿಚಾರಿಸಿಲ್ಲ. ಈ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆ ನಾನು

ಪಡೆದುಕೊಂಡಿಲ್ಲ ಮತ್ತು ಯಾವುದೇ ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ ಅಲ್ಲಾ. ಸಾಕ್ಷಿದಾರರ ಹೇಳಿಕೆಗಳನ್ನು ತನಿಖೆಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿ ಅಲ್ಲಾ. ಅದೇ ರೀತಿ ಸಾಕ್ಷಿದಾರರು ಯಾವುದೇ ಮುಂದುವರಿದ ಹೇಳಿಕೆ ನೀಡಿಲ್ಲ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟೇ ಇಲ್ಲಾ ಮತ್ತು ಘಟನಾ ಸ್ಥಳದಲ್ಲಿ ನಿಪಿ-2 ರಂತೆ ಮಹಜರು ಮಾಡಿಲ್ಲ, ನಿಪಿ-3 ರಂತೆ ನಕ್ಷೆ ತಯಾರಿಸಿಲ್ಲ ಮತ್ತು ನಿಪಿ-4 ರಂತೆ ಯಾವುದೇ ಛಾಯಾಚಿತ್ರ ತೆಗೆದಿಲ್ಲ ಎಂದರೆ ಸರಿ ಅಲ್ಲಾ. ಪ್ರಕರಣಕ್ಕೆ ಅನುಕೂಲವಾಗುವಂತೆ ಠಾಣೆಯಲ್ಲೇ ನಿಪಿ-2 ಮತ್ತು 3 ನ್ನು ತಯಾರಿಸಿ ಠಾಣಾ ಹೊರವಲಯದಲ್ಲಿ ನಿಪಿ-4 ಛಾಯಾಚಿತ್ರ ತೆಗೆಸಿರುತ್ತೇನೆ ಎಂದರೆ ಸರಿ ಅಲ್ಲಾ. ಚಾಸಾ.24 ವಿಜಯ ಕುಮಾರ್ ರವರು ನಿಪಿ-24 ರಂತೆ ಯಾವುದೇ ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿ ಅಲ್ಲಾ. ಆರೋಪಿತರನ್ನು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಹಾಜರುಪಡಿಸುವಂತೆ ನಾನು ಯಾವುದೇ ಜ್ಞಾಪನ ಪತ್ರ ಚಾಸಾ.22 ರವರಿಗೆ ನೀಡಿಲ್ಲ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ ದಿನಾಂಕ ಸ್ಥಳ ಮತ್ತು ಸ್ಥಳದಲ್ಲಿ ಚಾಸಾ.22 ರವರು 2 ನೇ ಆರೋಪಿತನನ್ನು ವಶಕ್ಕೆ ಪಡೆದುಕೊಂಡಿಲ್ಲ ಮತ್ತು ನನ್ನ ಸಮಕ್ಷಮ ವರದಿಯೊಂದಿಗೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲಾ. ಅದರಂತೆ ನಾನು ನಿಪಿ-19 ರಂತೆ ದಸ್ತಗಿರಿ ಮಹಜರು ತಯಾರಿಸಿಲ್ಲ ಎಂದರೆ ಸರಿ ಅಲ್ಲಾ. ನಿಪಿ-5 ರಂತೆ ಪಡೆದುಕೊಂಡ ಸಿಡಿ ಮು.ಮಾ.1 ನ್ನು ನಾನು ನೋಡಿದ್ದೇನೆ. ಮು.ಮಾ.1 ಸಿಡಿಯಲ್ಲಿ ಮಾತನಾಡುವುದು ಕಂಡು ಬರುತ್ತದೆ ಆದರೆ ನಿರ್ದಿಷ್ಟವಾದ ಜಾತಿ ನಿಂದನೆ ಮಾಡಿದ ಶಬ್ದದ ಬಳಕೆಯು ಕಂಡು ಬಂದಿಲ್ಲ ಅದರಂತೆ ನಿಪಿ-5 ರಲ್ಲಿ ಜಾತಿ ನಿಂದನೆಗೆ ಬಳಸಿದ ಶಬ್ದಗಳ ಬಗ್ಗೆ ಕಾಣಿಸಿಲ್ಲ ಎಂದರೆ ಸರಿ ಅಲ್ಲಾ. ಚಾಸಾ.5 ರವರು ನಿಪಿ-5 ರಂತೆ ನನ್ನ ಸಮಕ್ಷಮ ಯಾವುದೇ ಮೊಬೈಲ್ ಹಾಜರುಪಡಿಸಿಲ್ಲ ಮತ್ತು ಅದರಲ್ಲಿದ್ದ ವೀಡಿಯೋ ಮತ್ತು ಫೋಟೋಗಳನ್ನು ನಾನು ಲ್ಯಾಪ್ ಟಾಪ್ ಗೆ ವರ್ಗಾಯಿಸಿಕೊಂಡಿಲ್ಲ ಮತ್ತು ಯಾವುದೇ ಸಿಡಿ ತಯಾರಿಸಿಲ್ಲ ಎಂದರೆ ಸರಿ ಅಲ್ಲಾ. ಸದ್ರಿ ಮೊಬೈಲನ್ನು ಯಾವುದೇ ಮಹಜರು ಮೂಲಕ ನಾನು ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲಾ. ನಿಪಿ-7 ರಂತೆ ಯಾವುದೇ ಛಾಯಾಚಿತ್ರ ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲಾ. ನಿಪಿ-6 ರಂತೆ ಚಾಸಾ.5 ಕೃಷ್ಣಮೂರ್ತಿ ರವರು ಕಲಂ65 ಬಿ ರಡಿಯಲ್ಲಿ ನನಗೆ ಯಾವುದೇ ದೃಢೀಕರಣ ಪತ್ರ ನೀಡಿಲ್ಲ ಎಂದರೆ ಸರಿ ಅಲ್ಲಾ. ಅದೇ ರೀತಿ ನಾನು ಘಟನೆ ಬಗ್ಗೆ ನಿಪಿ-9 ರಂತೆ ಚಾಸಾ.15 ಪಿಡಿ ಓ ರವರಲ್ಲಿ ಕಟ್ಟಡದ ಬಗ್ಗೆ ವರದಿ ಕೇಳಿಲ್ಲ ಎಂದರೆ ಸರಿ ಅಲ್ಲಾ. ಅದರಂತೆ ನಿಪಿ-10 ರಂತೆ ಅವರು ಯಾವುದೇ

ವರದಿ ನೀಡಿಲ್ಲ ಎಂದರೆ ಸರಿ ಅಲ್ಲಾ. ಸದ್ರಿ ದಾಖಲಾತಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ.

ಅದೇ ರೀತಿ ನಾನು ಘಟನೆ ಬಗ್ಗೆ ನಿಪಿ-13 ರಂತೆ ಚಾಸಾ.17 ಮೆಸ್ಕಾಂ ಶಾಖಾಧಿಕಾರಿಯವರಲ್ಲಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡಿರುವ ಬಗ್ಗೆ ವರದಿ ಕೇಳಿಲ್ಲ ಎಂದರೆ ಸರಿ ಅಲ್ಲಾ. ಅದರಂತೆ ನಿಪಿ-14 ರಂತೆ ಅವರು ಯಾವುದೇ ವರದಿ ನೀಡಿಲ್ಲ ಎಂದರೆ ಸರಿ ಅಲ್ಲಾ. ಸದ್ರಿ ದಾಖಲಾತಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ಅದೇ ರೀತಿ ನಾನು ಘಟನೆ ಬಗ್ಗೆ ನಿಪಿ-21 ರಂತೆ ಚಾಸಾ.16 ರವರಲ್ಲಿ ವಿದ್ಯುತ್ ವ್ಯತ್ಯಯದ ಬಗ್ಗೆ ವರದಿ ಕೇಳಿಲ್ಲ ಎಂದರೆ ಸರಿ ಅಲ್ಲಾ. ಅದರಂತೆ ನಿಪಿ-11 ರಂತೆ ಅವರು ಯಾವುದೇ ವರದಿ ನೀಡಿಲ್ಲ ಎಂದರೆ ಸರಿ ಅಲ್ಲಾ. ಸದ್ರಿ ದಾಖಲಾತಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ.

ಚಾಸಾ.15 ಪಿ ಡಿ ಓ ರವರು ನಿಡಿ-3 ರಂತೆ ಗ್ರಾಮ ಪಂಚ್ಯಾತ್ ವ್ಯಾಪ್ತಿಯ ವಿದ್ಯುತ್ ರಹಿತ ಫಲಾನುಭವಿಗಳ ಪಟ್ಟಿ ನೀಡಿದ್ದು ಅದನ್ನು ನಾನು ಗಮನಿದ್ದೇನೆ. ಸದ್ರಿ ಪಟ್ಟಿಯಲ್ಲಿ ಕ್ರಮಾಂಕ 4 ರಲ್ಲಿ 1 ನೇ ಆರೋಪಿ ಭಾರತಿ ಗಾಣಿಗ ಇವರ ಹೆಸರು ಕಾಣಿಸಲಾಗಿದೆ ಎಂದರೆ ಸರಿ.

ದಿನಾಂಕ:11-04-2022 ರಂದು ಮೆಸ್ಕಾಂ ಗಂಗೊಳ್ಳಿ ರವರು ಪಿ ಡಿ ಓ ಗ್ರಾಮ ಪಂಚ್ಯಾತ್ ಗುಜ್ಜಾಡಿ ರವರಿಗೆ ನಿಡಿ-5 ರಂತೆ ನೀಡಿದ ಪತ್ರವನ್ನು ನಾನು ಗಮನಿದ್ದೇನೆ. ನನ್ನ ತನಿಖೆ ಕಾಲದಲ್ಲಿ ಫಿರ್ಯಾದಿದಾರಳು ಆರೋಪಿತರ ಕಟ್ಟಡಕ್ಕೆ ಪೂರೈಸಿದ ವಿದ್ಯುತ್ ಸಂಪರ್ಕವನ್ನು ಕಡಿತ ಮಾಡಲು ಪ್ರಯತ್ನ ಮಾಡಿದಾಗ ಅವಳ ವಿರುದ್ಧ ಆರೋಪಿತರು ಮೂಲ ದಾವಾ ನಂಬ್ರ 43/2023 ರಂತೆ ಪ್ರಕರಣ ದಾಖಲಿಸಿ ಹಂಗಾಮಿ ಹುಕುಂ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ದಾಖಲಾತಿಯನ್ನು ದೋಷಾರೋಪಣಾ ಪತ್ರದೊಂದಿಗೆ ಸಲ್ಲಿಸಿದ್ದೇನೆ ಎಂದರೆ ಮೆಸ್ಕಾಂ ಅಧಿಕಾರಿಯವರು ನೀಡಿದ ದಾಖಲಾತಿಯನ್ನು ದೋಷಾರೋಪಣಾ ಪತ್ರದೊಂದಿಗೆ ಸಲ್ಲಿಸಿದ್ದೇನೆ ಆ ದಾಖಲಾತಿ ಬಗ್ಗೆ ನಾನು ಕೂಲಂಕುಷವಾಗಿ ವಿಚಾರ ಮಾಡಿಲ್ಲ ಅಂತ ನುಡಿಯುತ್ತಾರೆ. ನಾನು ನಿಪಿ-10 ರಂತೆ ಚಾಸಾ.20 ಪಿ ಡಬ್ಲ್ಯು ಇಂಜಿನಿಯರ್ ರವರಿಗೆ ಕಟ್ಟಡದ ಬಗ್ಗೆ ವರದಿ ನೀಡುವಂತೆ ಕೋರಿಕೊಂಡಿಲ್ಲ ಎಂದರೆ ಸರಿ ಅಲ್ಲಾ. ಅದರಂತೆ ನಿಪಿ-25 ರಂತೆ ಅವರು ಯಾವುದೇ ವರದಿ ನೀಡಿಲ್ಲ ಎಂದರೆ ಸರಿ ಅಲ್ಲಾ. ನಿಪಿ-25 ರ ಪ್ರಕಾರ ಚಾಸಾ-20 ರವರು ಆರೋಪಿತರು ವಾಸವಾಗಿದ್ದ ಸ್ಥಳ ನಿರ್ಧಿಷ್ಟವಾಗಿ ಯಾವ ಸರ್ವೆ ನಂಬ್ರದಲ್ಲಿ ಬರುತ್ತದೆ ಅಂತ ಅಳತೆ ಮಾಡದೇ ಹೇಳಲು ಆಗುವುದಿಲ್ಲ ಅಂತ ವರದಿ ನೀಡಿರುತ್ತಾರೆ ಎಂದರೆ ಸರಿ.

1 ನೇ ಆರೋಪಿತನ ಮಗನ ವಿರುದ್ಧ ನಾನು ಬಾಲ ನ್ಯಾಯ ಮಂಡಳಿಯಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ಅದರಲ್ಲಿ ವಿಚಾರಣೆ ಆಗಿ ಆತನು ಬಿಡುಗಡೆ ಹೊಂದಿದ್ದಾನೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತನಿಖೆ ಕಾಲದಲ್ಲಿ 1 ಮತ್ತು 2 ನೇ ಆರೋಪಿತರು ಫಿರ್ಯಾದಿದಾರರು ಮತ್ತು ಚಾಸಾ.1 ಮತ್ತು 2 ರವರಿಗೆ ಜಾತಿ ನಿಂದನೆ ಮಾಡಿ ಕೊಲೆ ಬೆದರಿಕೆ ಹಾಕಿದ್ದು ಕಂಡು ಬಂದಿಲ್ಲ ಎಂದರೆ ಸರಿ ಅಲ್ಲಾ. ನನ್ನ ತನಿಖೆ ಕಾಲದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹಾ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

<u>ಮರು ವಿಚಾರಣೆ</u>ಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ